# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2857 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 30.03.2022. |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಸರ್ಕಾರಿ ಜಮೀನುಗಳ ತಾಲ್ಲೂಕುವಾರು ಪ್ರಮಾಣವೆಷ್ಟು; (ವಿವರ ನೀಡುವುದು) | ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಸರ್ಕಾರಿ ಜಮೀನುಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ಸದರಿ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನುಗಳ ಅಕ್ರಮ ಸ್ವಾಮ್ಯ ಹೊಂದಿರುವ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ; ಅಂತಹವರ ಮೇಲೆ ಸರ್ಕಾರ ಕೈಗೊಂಡ ಕಠಿಣ ಕ್ರಮಗಳೇನು; ಅಕ್ರಮ ಸ್ವಾಮ್ಯದ ಎಷ್ಟು ಪ್ರಕರಣಗಳಲ್ಲಿ ಜಮೀನನ್ನು ಸರ್ಕಾರ ವಶಪಡಿಸಿಕೊಂಡಿದೆ. | ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಅಕ್ರಮ ಸ್ವಾಮ್ಯದಲ್ಲಿದ್ದ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆದಿರುವ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.<br><br>ರಾಜ್ಯದಲ್ಲಿರುವ ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸಲು ಹಾಗೂ ಸಂರಕ್ಷಿಸಲು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 15 ಎಲ್‌ಜಿಪಿ 2020, ದಿನಾಂಕ: 29.01.2020ರ ಆದೇಶದ ಮೂಲಕ 07 ಸದಸ್ಯರುಗಳನ್ನೊಳಗೊಂಡಂತೆ ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿಯನ್ನು ರಚಿಸಲಾಗಿದೆ, ಸದರಿ ಸಮಿತಿಯು ಜಿಲ್ಲೆಗಳ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಪ್ರತಿ ವಾರವೂ ಪರಿಶೀಲನಾ ಸಭೆಯನ್ನು ನಡೆಸುತ್ತಿದ್ದು, ಭೂ ಕಬಳಿಕೆ ತಡೆಯುವ ನಿಟ್ಟಿನಲ್ಲಿ ಅಗತ್ಯ ನಿರ್ದೇಶನಗಳನ್ನು ಸರ್ಕಾರಕ್ಕೆ ಕಾಲಕಾಲಕ್ಕೆ ನೀಡಲಾಗುತ್ತಿದೆ.<br><br>ಒತ್ತುವರಿ ಪ್ರಕರಣಗಳನ್ನು ಸಮರ್ಥವಾಗಿ ತಡೆಯುವ ಸಲುವಾಗಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ರಚಿಸಲಾಗಿದೆ. ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 192 (ಎ)ರನ್ವಯ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br><br>1. ದಾಖಲಾಗಿರುವ ಪ್ರಕರಣಗಳು : 20,994<br>2. ಇತ್ಯರ್ಥಪಡಿಸಿದ ಪ್ರಕರಣಗಳು : 5,132<br>3. ಬಾಕಿ ಇರುವ ಪ್ರಕರಣಗಳು : 15,862<br>4. ಶಿಕ್ಷ ವಿಧಿಸಲಾಗಿರುವ ಪ್ರಕರಣ ಸಂಖ್ಯೆ: 69 ಜನರಿಗೆ ಒಂದು ವರ್ಷದಂತೆ ಶಿಕ್ಷೆ ಹಾಗೂ ದಂಡ ವಿಧಿಸಲಾಗಿದೆ. |

| | | |
|---|---|---|
| | | ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 20 ಎಲ್‌ಜಿಪಿ 2020, ದಿ: 20.01.2020 ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವುದು, ಒತ್ತುವರಿದಾರರ ವಿರುದ್ಧ ಕ್ರಮ ಜರುಗಿಸುವುದು, ಒತ್ತುವರಿ ತೆರವುಗೊಳಿಸಲು ವಿಫಲರಾಗಿರುವ ಅಧಿಕಾರಿಗಳು/ಭೂ ಕಬಳಿಕೆಗೆ ಪ್ರೇರಣೆ ನೀಡಲು, ನಕಲಿ ದಾಖಲೆಗಳನ್ನು ಸೃಷ್ಟಿಸಲು ಸಹಕರಿಸಿ ಶಾಮೀಲಾಗಿರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕಾನೂನು/ಶಿಸ್ತು ಕ್ರಮಗಳನ್ನು ಜರುಗಿಸಲು ಸೂಚನೆ ನೀಡಲಾಗಿದೆ.<br><br>➢ ಭೂ ಕಬಳಿಕೆ ಮಾಡಿದ ವ್ಯಕ್ತಿಗಳ ವಿರುದ್ಧದ ಸ್ಥಳೀಯ ಪೊಲೀಸ್ ಠಾಣೆಯಲ್ಲಿ 192(ಎ&ಬಿ) ರಡಿ ಎಫ್.ಐ.ಆರ್. ದಾಖಲಿಸಲಾಗುತ್ತಿದೆ. ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು 327 ಪ್ರಕರಣಗಳಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ.<br><br>➢ ವಿಶೇಷ ಭೂ ಕಬಳಿಕೆ ನಿಷೇಧ ನ್ಯಾಯಾಲಯದಲ್ಲಿ ಒಟ್ಟು 503 ಪ್ರಕರಣಗಳು ದಾಖಲಾಗಿ ಪರಿಶೀಲನೆ ಯಲ್ಲಿರುತ್ತದೆ.<br><br>➢ ಭೂ ಕಬಳಿಕೆ ಪ್ರಕರಣಗಳನ್ನು ಗುರುತಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆಯಡಿ ಕ್ರಮ ಕೈಗೊಳ್ಳಲು ಚಾಲನೆ ನೀಡಲಾಗಿದೆ. ಕೆಲವು ಭೂ ಕಬಳಿಕೆದಾರರು ಮಂಜೂರು ದಾಖಲೆಗಳು ಇರುವುದಾಗಿ ತಿಳಿಸಿದ್ದು, ಸದರಿ ದಾಖಲೆಗಳ ನೈಜತೆಯನ್ನು ಪರಿಶೀಲಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 136 (3) ರಡಿ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ. ಪ್ರಸ್ತುತ 3 ವಿಶೇಷ ಜಿಲ್ಲಾಧಿಕಾರಿಗಳ ಹುದ್ದೆಯನ್ನು ಈ ಉದ್ದೇಶಕ್ಕೆ ಸೃಜಿಸಲಾಗಿದ್ದು, ಈಗಾಗಲೇ 4249 ಪ್ರಕರಣಗಳು ದಾಖಲಾಗಿ 390 ಪ್ರಕರಣಗಳಲ್ಲಿ ಸರ್ಕಾರದ ಪರವಾಗಿ ದಾಖಲಾಗಿದ್ದು, ಉಳಿಕೆ ಪ್ರಕರಣಗಳು ವಿಚಾರಣಾ ಹಂತದಲ್ಲಿರುತ್ತದೆ.<br><br>ಉಳಿದಂತೆ ಬಾಕಿ ಇರುವ ಒತ್ತುವರಿ ಜಮೀನುಗಳನ್ನು ಅಳತೆ ಕಾರ್ಯವನು ಕೈಗೊಳ್ಳಲಾಗುತ್ತಿದ್ದು ಹಂತ ಹಂತವಾಗಿ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ವಿವಿಧ ಇಲಾಖೆಗಳ ಸ್ವಾಧೀನದಲ್ಲಿರುವ ಗೋಮಾಳ ಮತ್ತಿತರ ಜಮೀನುಗಳನ್ನು ಅಕ್ರಮ ಸ್ವಾಮ್ಯ ಹೊಂದುವ ಸಾಧ್ಯತೆಗಳು ಹೆಚ್ಚಿರುವುದರಿಂದ ಸರ್ಕಾರಿ ಜಮೀನುಗಳ ಶಾಶ್ವತ ಸಂರಕ್ಷಣೆಗೆ ಕಟ್ಟುನಿಟ್ಟಿನ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಜರುಗಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳಿಗೆ ಮಂಜೂರು ಮಾಡಿರುವ ಸರ್ಕಾರಿ ಜಮೀನಿನಲ್ಲಿ ಅಕ್ರಮ ಸ್ವಾಮ್ಯ ಹೊಂದಿರುವ ಪ್ರಕರಣಗಳು ಕಂಡುಬಂದಿರುವುದಿಲ್ಲ.<br><br>ಸದರಿ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನುಗಳ ಶಾಶ್ವತ ಸಂರಕ್ಷಣೆಗಾಗಿ ಕರ್ನಾಟಕ ಸಾರ್ವಜನಿಕ ಜಮೀನುಗಳು ನಿಗಮ ನಿಯಮಿತಿ (ಕೆಪಿಎಲ್‌ಸಿ) ಇವರಿಗೆ ಅನುದಾನ ಒದಗಿಸಿದ್ದು, ಟ್ರಂಚ್ ಮತ್ತು ತಂತಿ ಬೇಲಿ ಅಳವಡಿಸಲು ಕ್ರಮವಹಿಸಲಾಗುತ್ತಿದ. |

ಸಂಖ್ಯೆ: ಆರ್‌ಡಿ 143 ಎಲ್‌ಜಿಕ್ಯೂ 2022

(ಆರ್.ಅಶೋಕ)
ಕಂದಾಯ ಸಚಿವರು

## ಅನುಬಂಧ-1

## ಬೆಂಗಳೂರು ನಗರ ಜಿಲ್ಲೆ

| ಕ್ರ. ಸಂ | ತಾಲ್ಲೂಕು | ವಿಸ್ತೀರ್ಣ ಎಕರೆ/ಗುಂಟೆ |
|---|---|---|
| 1 | ಬೆಂಗಳೂರು ಉತ್ತರ | 11847-00 |
| 2 | ಬೆಂಗಳೂರು ದಕ್ಷಿಣ | 33130-00 |
| 3 | ಬೆಂಗಳೂರು ಪೂರ್ವ | 18745-00 |
| 4 | ಯಲಹಂಕ | 26244-00 |
| 5 | ಆನೇಕಲ್ | 32952-00 |
| | ಒಟ್ಟು | 122918-00 |

## ಬೆಂಗಳೂರು ಗ್ರಾಮಾಂತರ ಜಿಲ್ಲೆ

| ಕ್ರ. ಸಂ | ತಾಲ್ಲೂಕು | ವಿಸ್ತೀರ್ಣ ಎಕರೆ/ಗುಂಟೆ |
|---|---|---|
| 1 | ದೇವನಹಳ್ಳಿ | 31637-00 |
| 2 | ದೊಡ್ಡಬಳ್ಳಾಪುರ | 27234-00 |
| 3 | ಹೊಸಕೋಟೆ | 35155-00 |
| 4 | ನೆಲಮಂಗಲ | 14269-00 |
| | ಒಟ್ಟು | 108295-00 |

# ಅನುಬಂಧ-2
# ಬೆಂಗಳೂರು ನಗರ ಜಿಲ್ಲೆ

| ಕ್ರ. ಸಂ | ತಾಲ್ಲೂಕು | ಅಕ್ರಮ ಸ್ವಾಮ್ಯ ಹೊಂದಿರುವ ಪ್ರಕರಣಗಳು | ಸರ್ಕಾರದ ವಶಕ್ಕೆ ಪಡೆದಿರುವ ಪ್ರಕರಣಗಳು |
|---|---|---|---|
| 1 | ಬೆಂಗಳೂರು ಉತ್ತರ | 660 | 584 |
| 2 | ಬೆಂಗಳೂರು ದಕ್ಷಿಣ | 6759 | 1976 |
| 3 | ಬೆಂಗಳೂರು ಪೂರ್ವ | 4762 | 1433 |
| 4 | ಯಲಹಂಕ | 1253 | 320 |
| 5 | ಆನೇಕಲ್ | 1226 | 369 |
| | **ಒಟ್ಟು** | **14660** | **4682** |

# ಬೆಂಗಳೂರು ಗ್ರಾಮಾಂತರ ಜಿಲ್ಲೆ

| ಕ್ರ. ಸಂ | ತಾಲ್ಲೂಕು | ಅಕ್ರಮ ಸ್ವಾಮ್ಯ ಹೊಂದಿರುವ ಪ್ರಕರಣಗಳು | ಸರ್ಕಾರದ ವಶಕ್ಕೆ ಪಡೆದಿರುವ ಪ್ರಕರಣಗಳು |
|---|---|---|---|
| 1 | ದೇವನಹಳ್ಳಿ | 2524 | 2128 |
| 2 | ದೊಡ್ಡಬಳ್ಳಾಪುರ | 13328 | 3226 |
| 3 | ಹೊಸಕೋಟೆ | 12758 | 4216 |
| 4 | ನೆಲಮಂಗಲ | 9936 | 1322 |
| | **ಒಟ್ಟು** | **38546** | **10892** |